


ಎಡದಿಂದ ಬಲಕ್ಕೆ:
1. ಅಲ್ಲಿ ಪರಕೆಯನ್ನು ಮಾರುತ್ತಿರುವವ ನಮ್ಮವನಲ್ಲ ಬಿಡಿ (4)
3. ತುಸು ತುಸುವೇ ಆದರೂ ನಿರಂತರ (3)
4. ಕ್ಷೀಣ ಜ್ಯೋತಿ ಕಂಡಲ್ಲೇ ದಿಗಂತ (3)
6. ಜನರ ನಡುವೆ ರಾಣಿಗೆ ಗೌರವ ಕಾಣಿಕೆ (4)
7. ವನಿತೆಯರೆಲ್ಲ ಸೇರಿ ಕಡೆದದ್ದು ಬೆಣ್ಣೆ (4)
8. ಆ ದಂಪತಿ ಪೂಜಿಸಿದ್ದು ಕುಬೇರನನ್ನೇ? (4)
10. ಆಚಾರ್ಯರ ಕೆಲಸವೆಲ್ಲ ಬರೀ ಗಣಿತಕ್ರಿಯೆಯೇ (4)
12. ವಿರಸ ತೀರಿದರೆ ಸರಿ, ವಿದ್ಯಾದೇವತೆ ಪ್ರತ್ಯಕ್ಷ (4)
14. ಭಾಗ ಕೇಳಿದ್ದು ಕೇವಲ ನಾಲ್ಕರ ಒಂದಂಶ (4)
16. ನಕ್ಕಿದ್ದನ್ನೇ ತಪ್ಪೆಂದು ಮಾಡಿ ಭಾರೀ ಹೋರಾಟ (3)
17. ತಣ್ಣಗೆ ಕುಳಿತಾಗಲೆಲ್ಲ ಕಲಿತದ್ದು ಲೆಕ್ಕ ಶಾಸ್ತ್ರ (3)
18. ಮತದಾನದ ವಿಷಯದಲ್ಲೂ ಸ್ವಂತಿಕೆ ಇರಬೇಕು (4)

ಮೇಲಿಂದ ಕೆಳಕ್ಕೆ:
1. ತಪ್ಪನ್ನೇ ಮಾಡಿ ಮಾಡಿ ಬಿದ್ದದ್ದಾಯಿತು (3)
2. ರಕ್ಷಣೆಯ ಭ್ರಮೆ ಮೂಡಿಸಿದ ಇಂದ್ರಜಾಲ (3)
3. ಇಷ್ಟು ಹಸಿವೆಯನ್ನ ಸಹಿಸಬಹುದು ಬಿಡಿ (4)
5. ಜನರ ನೇತಾರನ ಹುಟ್ಟು (3)
7. ಅಲ್ಲಿ ನೆರೆದವರೆಲ್ಲರದೂ 'ಮುಪ್ಪಡರಿದ ಶಿರ' (4)
9. ತೃಪ್ತಿ ತಂದೀತೇ ಆ ಶ್ರೀನಿವಾಸನ ಊರು (4)
11. ಚಲಕ ಎಳೆದವನೇ ಗಾಡಿ ನಡೆಸುವವ (3)
13. ತುಮಕೂರಿನಲ್ಲಿ ಹುಡುಕಿ ತಂದ ಅಮೂಲ್ಯ ಮಣಿ (4)
14. ಕನಕವನ್ನು ಹುಡುಕುತ್ತ ಅಡವಿ ಸೇರಿದರೇ? (3)
15. ಯಾವುದೋ ಗುಂಗಿನಲ್ಲಿ ಕಂಡದ್ದು ಆಕಾಶ (3)

## ಪದಬಂಧ: 03-03-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರತಿದನಿ; 3. ಗಲಭೆ; 7. ಸಾವು ನೋವು; 8. ಗರೀಬ; 9. ಗೆಲ್ಲು; 12. 'ಛಕಾ'; 14. ಕವಲು; 15. ವರ್ಷಾಕಾಲ; 17. ನಿಕಟ; 18. ದಿನಭತ್ಯ.


ಮೇಲಿಂದ ಕೆಳಕ್ಕೆ:

1. ಪ್ರಭೆ; 2. ದಣಿವು; 4. ಲಗುಬಗೆ; 5. ಹಾವುಗೆ; 6. ರಾಗತಾಳ; 10. ಹಾಲು ಹಲ್ಲು; 11. ಆಕಸ್ಮಿಕ; 13. ಕಾವಲು; 16. ಕಾನನ; 17. ನಿತ್ಯ.

# ಪ್ರದೇಶ-ವಿಶೇಷ

## 'ಬೆಂಕಿ ಉಂಗುರ' – ಅದೇನು?

ಧರೆಯ ಸಾಗರಗಳಲ್ಲೆಲ್ಲ ಶಾಂತ ಸಾಗರವೇ ಅತ್ಯಂತ ವಿಶಾಲ, ಹೌದಲ್ಲ? ಇಡೀ ಭೂ ಮೇಲ್ಮೈನ ಶತಾಂಶ ಮುವ್ವತ್ತೂರರಷ್ಟು ಭಾಗವನ್ನು ಈ ಸಾಗರವೇ ಆಕ್ರಮಿಸಿದೆ. ಅಷ್ಟೇ ಅಲ್ಲದೆ ಈ ಮಹಾಸಾಗರ ನಾಲ್ಕು ಭೂ ಖಂಡಗಳಿಂದ–ಆಸ್ಟ್ರೇಲಿಯಾ, ಏಷಿಯ, ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕ–ಸುತ್ತುವರೆದಿದೆ. ಸಹಜವಾಗಿಯೇ ಈ ಕಡಲು ಅತ್ಯಂತ ದೀರ್ಘ ಕರಾವಳಿಯನ್ನು ರೂಪಿಸಿದೆ. ನ್ಯೂಜಿಲ್ಯಾಂಡ್‌ನಿಂದ ಆರಂಭವಾಗಿ ಫಿಜಿ, ನ್ಯೂಗನಿ, ಫಿಲಿಪ್ಪೀನ್ಸ್, ಜಪಾನ್. ಹಾಗೆಯೇ ಉತ್ತರ ಮತ್ತು ದಕ್ಷಿಣ ಅಮೆರಿಕಗಳ ಪಶ್ಚಿಮ ತೀರಗಳ ತುದಿವರೆಗೆ ಶಾಂತ ಸಾಗರ ತೀರ ಮುವ್ವತ್ತು ಸಾವಿರ ಕಿಲೋಮೀಟರ್‌ಗೂ ಅಧಿಕ ಉದ್ದಕ್ಕೆ ಹಬ್ಬಿದೆ.




ವಿಶೇಷ ಏನೆಂದರೆ ಪೆಸಿಫಿಕ್ ಸಾಗರದ ಕರಾವಳಿಯ ಉದ್ದಕ್ಕೂ ಅಲ್ಲಲ್ಲಿ ಅಲ್ಲಲ್ಲಿ ಹೇರಳ ಸಂಖ್ಯೆಯಲ್ಲಿ ಅಗ್ನಿಪರ್ವತಗಳು ನೆಲೆಗೊಂಡಿವೆ. ಶಾಂತ ಸಾಗರಕ್ಕೊಂದು ಕಂಠೀಹಾರ ತೊಡಿಸಿದಂತೆ ಹರಡಿರುವ ಈ ಜ್ವಾಲಾಮುಖಿ ವರ್ತುಲಕ್ಕೇ (ಚಿತ್ರದಲ್ಲಿ ಕೆಂಪು ಬಣ್ಣದ ಪ್ರದೇಶ) 'ಬೆಂಕಿ ಉಂಗುರ' (ದಿ ರಿಂಗ್ ಆಫ್ ಫೈರ್) ಎಂದು ಭೂ ವಿಜ್ಞಾನಿಗಳು ಹೆಸರಿಸಿದ್ದಾರೆ. ಅತ್ಯಂತ ಪ್ರಬಲ ಪ್ರಸಿದ್ಧ ಜೀವಂತ ಜ್ವಾಲಾಮುಖಿಗಳೆಲ್ಲ ಬಹುಪಾಲು ಈ ಪ್ರದೇಶದಲ್ಲೇ ಇವೆ: 'ಕ್ರಕಟೋವಾ, ತಾಂಬೋರಾ, ಪಿನಾಟುಬೋ, ಫ್ಯೂಜಿಯಾಮಾ, ಕಟ್ಮಾಯೀ, ಶೀಷಾಲ್ಡೀನ್, ಅಸಾಮಾ, ಸೇಂಟ್ ಹೆಲೆನ್ಸ್, ಮೌನಲೋವಾ, ಕಿಲೋವಾ, ಪೆಲೀ, ಲಾಸ್ಕಾರ್ ಇತ್ಯಾದಿ.' ಪ್ರಳಯಕಾರೀ ಸ್ಫೋಟಗಳ ಇತಿಹಾಸದ ಇಂತಹ ನೂರಾರು ಜೀವಂತ ಜ್ವಾಲಾಮುಖಿಗಳ ನೆಲೆಯಾಗಿರುವುದರಿಂದ ಈ ಪ್ರದೇಶಕ್ಕೆ 'ಬೆಂಕಿ ಉಂಗುರ' ಎಂಬ ಹೆಸರು ಅನ್ವರ್ಥಕ.

ಶಾಂತಸಾಗರದ ತಳದ ಶಿಲಾಫಲಕಗಳ ಅಂಚುಗಳು ಕರಾವಳಿಯ ಉದ್ದಕ್ಕೂ ಭೂ ಖಂಡಗಳ ಶಿಲಾಫಲಕಗಳ ಅಂಚುಗಳನ್ನು ಪ್ರಬಲವಾಗಿ ಒತ್ತುತ್ತ ಭೂ ಕವಚದ ಕಡೆಗೆ ಬಾಗುತ್ತ ಮುಳುಗುತ್ತಿವೆ. ಹಾಗಾಗಿ ಈ ಪ್ರದೇಶದಲ್ಲಿ ಇಷ್ಟೊಂದು ಜ್ವಾಲಾಮುಖಿಗಳು ಅವತರಿಸಿವೆ, ಕ್ರಿಯಾಶೀಲವಾಗಿವೆ. ಸಹಜವಾಗಿಯೇ ಇದೇ ಪ್ರದೇಶದಲ್ಲೇ ಭೂಕಂಪಗಳೂ ಅವಿರತ, ವಿಪರೀತ.

ಭಾರೀ ಸಂಖ್ಯೆಯ ಜ್ವಾಲಾಮುಖಿಗಳು ಕ್ರಿಯಾಶೀಲವಾಗಿರುವುದರಿಂದ ಸ್ಪಷ್ಟವಾಗಿಯೇ ಭೂ ಕವಚದಿಂದ ಹೊರಕ್ಕೆ ರವಾನೆಗೊಳ್ಳುತ್ತಿರುವ ಖನಿಜಗಳ, ಭೂ ನಿಧಿ–ನಿಕ್ಷೇಪಗಳ ಪ್ರಮಾಣವೂ ಬೆಂಕಿ ಉಂಗುರ ಪ್ರದೇಶದಲ್ಲೇ ಗರಿಷ್ಠ ಬಂಗಾರ, ಬೆಳ್ಳಿ, ತಾಮ್ರ, ಪ್ಲಾಟಿನಂ, ಪಾದರಸ, ತವರ, ಸೀಸ, ಕಬ್ಬಿಣ, ಸತು ಇತ್ಯಾದಿ ಲೋಹಗಳ ಮತ್ತು ಬಹುವಿಧ ಅಲೋಹಗಳ ಅತಿ ಸಮೃದ್ಧ ನಿಕ್ಷೇಪಗಳು ಈ ಪ್ರದೇಶದಲ್ಲೇ ಸಂಗ್ರಹಗೊಂಡಿವೆ.

■ ಎನ್.ವಾಸುದೇವ್